ಯಾರು 'ಸುಬ್ಹಾನಲ್ಲಾಹಿಲ್ ಅಝೀಮ್ ವಬಿ ಹಮ್ದಿಹಿ' (ಮಹೋನ್ನತನಾದ ಅಲ್ಲಾಹು ಪರಿಶುದ್ಧನು ಮತ್ತು ಅವನಿಗೆ ಸರ್ವಸ್ತುತಿಗಳು) ಎಂದು ಹೇಳುತ್ತಾನೋ, ಅವನಿಗಾಗಿ ಸ್ವರ್ಗದಲ್ಲಿ ಒಂದು ಖರ್ಜೂರದ ಮರವನ್ನು ನೆಡಲಾಗುತ್ತದೆ

ಜಾಬಿರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ
ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು 'ಸುಬ್ಹಾನಲ್ಲಾಹಿಲ್ ಅಝೀಮ್ ವಬಿ
ಹಮ್ದಿಹಿ' (ಮಹೋನ್ನತನಾದ ಅಲ್ಲಾಹು ಪರಿಶುದ್ಧನು ಮತ್ತು ಅವನಿಗೆ ಸರ್ವಸ್ತುತಿಗಳು) ಎಂದು ಹೇಳುತ್ತಾನೋ, ಅವನಿಗಾಗಿ ಸ್ವರ್ಗದಲ್ಲಿ ಒಂದು ಖರ್ಜೂರದ ಮರವನ್ನು ನೆಡಲಾಗುತ್ತದೆ".
[صحيح] [رواه الترمذي]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಯಾರು '(ಸುಬ್ಹಾನಲ್ಲಾಹ್)' ಅಂದರೆ - ಅವನ ಅಸ್ತಿತ್ವದಲ್ಲಿ, ಗುಣಲಕ್ಷಣಗಳಲ್ಲಿ ಮತ್ತು ಕ್ರಿಯೆಗಳಲ್ಲಿ '(ಅಲ್-ಅಝೀಮ್)' ಮಹೋನ್ನತನಾದ ಅಲ್ಲಾಹುವನ್ನು ನಾನು ಪರಿಶುದ್ಧನೆಂದು ಸಾರುತ್ತೇನೆ, ಮತ್ತು '(ವಬಿ ಹಮ್ದಿಹಿ)' ಅವನ ಗುಣಗಳೆಲ್ಲವೂ ಪರಿಪೂರ್ಣವಾಗಿವೆಯೆಂದು ಹೇಳುವ ಮೂಲಕ ಅವನನ್ನು ಸ್ತುತಿಸುತ್ತೇನೆ ಎಂದು ಹೇಳುತ್ತಾನೋ; ಅವನು ಪ್ರತಿ ಬಾರಿ ಅದನ್ನು ಹೇಳುವಾಗ ಸ್ವರ್ಗದ ಭೂಮಿಯಲ್ಲಿ ಅವನಿಗಾಗಿ ಒಂದು ಖರ್ಜೂರದ ಮರವನ್ನು ಸ್ಥಾಪಿಸಲಾಗುತ್ತದೆ ಮತ್ತು ನೆಡಲಾಗುತ್ತದೆ.

http://www.sunnah.global/hadeeth/kn/show/4201